## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ

**ಸಿ. ಸಿ. ನಂ. 35/2018**

**ಚಾ.ಸಾಃ 1, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಗಣಪತಿ ಭಟ್ಟ |
| ತಂದೆಯ ಹೆಸರು | ವಿನಾಯಕ ಭಟ್ಟ |
| ವಯಸ್ಸು | 55 ವರ್ಷಗಳು |
| ಉದ್ಯೋಗ | ಕೃಷಿ |
| ವಾಸ್ತವ್ಯ | ಸಾಲಕೋಡ ಗ್ರಾಮ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 25-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಅರೆಅಂಗಡಿಯಲ್ಲಿರುವ ಕರಿಕಾನ ಪರಮೇಶ್ವರಿ ಸೇವಾ ಸಹಕಾರಿ ಸಂಘಕ್ಕೆ 3 ಅವಧಿಗೆ ಅಧ್ಯಕ್ಷನಾಗಿದ್ದೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಸದರಿ ಸಂಘದ ನಿರ್ದೇಶಕರು, 2 ನೇ ಆರೋಪಿ ಸಂಘದ ದಿನಗೂಲಿ ನೌಕರರಾಗಿದ್ದರು.

ನನ್ನ ಅವಧಿಯಲ್ಲಿ ನಾರಾಯಣ ಶಂಭು ಹೆಗಡೆ ಎನ್ನುವವರು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 2 ನೇ ಆರೋಪಿ ಆತನಿಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದರು. ಸಂಘದ ಎಲ್ಲಾ ಚೆಕ್ಕುಗಳಿಗೆ ಸಂಘದ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಸಹಿ ಮಾಡುತ್ತಾರೆ. ಅಧ್ಯಕ್ಷರು ಪ್ರತಿನಿತ್ಯ ಸಂಘಕ್ಕೆ ಬರುವ ಅವಶ್ಯಕತೆ ಇಲ್ಲ. ಪ್ರತಿ ತಿಂಗಳು ಸಭೆಗೆ ಮಾತ್ರ ಬರಬೇಕು. ಉಳಿದಂತೆ ಆಗಾಗ ಬಂದು ಹೋಗುತ್ತಾರೆ. ಚೆಕ್ಕುಗಳು ಕಾರ್ಯದರ್ಶಿಯವರ ತಾಬಾದಲ್ಲಿದ್ದು ಅವಶ್ಯಕತೆ ಬಿದ್ದಾಗ ಬಳಸಿಕೊಳ್ಳಲು ಕಾರ್ಯನಿರ್ವಹಣಾಧಿಕಾರಿಗಳ ಮೇಲಿನ ವಿಶ್ವಾಸದಿಂದ ಸಂಘದ ಉಪಯೋಗಕ್ಕಾಗಿ ಕೆಲವು ಖಾಲಿ ಚೆಕ್ಕುಗಳ ಮೇಲೆ ಸಹಿ ಮಾಡಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಬಳಿ ಕೊಟ್ಟಿರುತ್ತೇನೆ. ನನ್ನೊಬ್ಬನ ಸಹಿಯಿಂದ ಚೆಕ್ಕು ಮಾನ್ಯವಾಗುವುದಿಲ್ಲ. ಅವಶ್ಯಕತೆ ಬಿದ್ದಾಗ ನನ್ನ ಸಹಿಯ ಜೊತೆಯಲ್ಲಿ ಕಾರ್ಯನಿರ್ವಹಣಾಧಿಕಾರಿಗಳು ಸಹಿ ಮಾಡಿ ನೀಡಿದರೆ ಮಾತ್ರ ಚೆಕ್ಕು ಮಾನ್ಯ ಆಗುತ್ತದೆ. ಸಂಘದ ಕಾರ್ಯದರ್ಶಿ ಎಆರ್ ಕಚೇರಿಗೆ ಸಭೆಗೆ ಮತ್ತು ಇತರೇ ಕೆಲಸಕ್ಕೆ ಹೋದಾಗ ಸಂಘದ ಕಾರ್ಯಗಳು ಸುಲಭವಾಗಿ ನಡೆಯಲಿ ಎನ್ನುವ ಕಾರಣಕ್ಕೆ ಕಾರ್ಯದರ್ಶಿಗಳು ಚೆಕ್ಕಿಗೆ ಸಹಿ ಹಾಕಿ 2 ನೇ ಆರೋಪಿಗೂ ಸಹ ಸಹಿ ಹಾಕಿ ಕೊಟ್ಟು ಹೋಗುತ್ತಿದ್ದರು.

ದಿನಾಂಕ 16-06-2016 ರಂದು ಸಂಘದ ವಾರ್ಷಿಕ ಸಭೆ ನಡೆದಿರುತ್ತದೆ. ಸದರಿ ಸಭೆಯಲ್ಲಿ ಸಿಮೆಂಟನ್ನು ಉದ್ರಿಯ ಮೇಲೆ ಮಾರಾಟ ಮಾಡಿ ಬರಬೇಕಾದ ಹಣದ ಬಗ್ಗೆ ಸದಸ್ಯರಿಂದ ಆಕ್ಷೇಪ ಬಂದಿದ್ದು ಕಾರ್ಯದರ್ಶಿಗಳು ಒಂದು ತಿಂಗಳೊಳಗಾಗಿ ಬಾಕಿಯನ್ನು ಪೂರ್ತಿ ವಸೂಲಿ ಮಾಡಲಾಗುತ್ತದೆ ಎಂದು ಲಿಖಿತ ರೂಪದಲ್ಲಿ ಬರವಣಿಗೆ ನೀಡಿದರು. ಅದಕ್ಕೆ ಸದಸ್ಯರು ಒಪ್ಪಿಕೊಂಡರು. ತದನಂತರ ಸಿಮೆಂಟನ್ನು ಯಾವುದೇ ಬಿಲ್ಲು ಮತ್ತು ದಾಖಲೆ ಇಲ್ಲದೇ ಕಾರ್ಯದರ್ಶಿಗಳು ಮಾರಾಟ ಮಾಡಿರುವುದು ಸಂಘದ ಗಮನಕ್ಕೆ ಬಂದಿರುತ್ತದೆ.

**ಚಾ.ಸಾಃ 1, ಪ್ರಾ.ಸಾಃ 1**

ದಿನಾಂಕ 26-09-2016 ರಂದು ಕಾರ್ಯನಿರ್ವಹಣಾಧಿಕಾರಿಗಳು ಸಹಕಾರಿ ಅಭಿವೃದ್ಧಿ ಅಧಿಕಾರಿಗೆ ಒಂದು ಪತ್ರ ಬರೆದು ತಾನು ಸಹಿ ಮಾಡಿ ಇಟ್ಟಿದ್ದ ಕೆಡಿಸಿಸಿ ಬ್ಯಾಂಕಿನ ಒಂದು ಖಾಲಿ ಚೆಕ್ ಸಂಖ್ಯೆ 666227 ನ್ನು 2 ನೇ ಆರೋಪಿಗೆ ಕೊಟ್ಟಿದ್ದು ವಾಪಸ್ಸು ಬಂದು ಕೇಳಿದಾಗ ಸದರಿ ಚೆಕ್ಕಿನ ಬಗ್ಗೆ ಯಾವುದೇ ಮಾಹಿತಿ ನೀಡುತ್ತಿಲ್ಲ ಮತ್ತು ವಿಚಾರಿಸಿದಾಗ ಸದರಿ ಚೆಕ್ಕನ್ನು 1 ನೇ ಆರೋಪಿ ಹೆಸರಿಗೆ ಬರೆದು ರೂ.12,00,000-00 ಹಣವನ್ನು ಕರ್ನಾಟಕ ಬ್ಯಾಂಕಿಗೆ ಹಾಜರುಪಡಿಸಿ 1 ನೇ ಆರೋಪಿಯ ಖಾತೆಗೆ ಜಮಾ ಮಾಡಿಕೊಂಡಿರುವುದು ಗಮನಕ್ಕೆ ಬಂದಿದ್ದು ಇದನ್ನು ಹೇಗೆ ಸಂಘದಲ್ಲಿ ಜಮಾ ಖರ್ಚು ಮಾಡಬಹುದು ಅಂತ ಪತ್ರ ಬರೆದಿದ್ದರು. ಅಲ್ಲದೇ ಸದರಿ ಪತ್ರದಲ್ಲಿ 1 ನೇ ಆರೋಪಿಗೆ ಯಾವುದೇ ಠೇವಣಿ ಮೊತ್ತ ಕೊಡುವುದು ಬಾಕಿ ಇರುವುದಿಲ್ಲ ಮತ್ತು ಯಾವುದೇ ಸಾಲ ಮಂಜೂರಾಗಿರುವುದಿಲ್ಲ ಅಂತ ಸಹ ಪತ್ರದಲ್ಲಿ ಬರೆದಿರುತ್ತಾರೆ. ಆದ್ದರಿಂದ ಸಹಕಾರಿ ಅಭಿವೃದ್ಧಿ ಅಧಿಕಾರಿಯವರು ಸಂಘಕ್ಕೆ ಭೇಟಿ ನೀಡಿ ಪ್ರಾಥಮಿಕ ತನಿಖೆ ಮಾಡಿ ಒಂದು ಪ್ರಾಥಮಿಕ ವರದಿಯನ್ನು ಸಹಕಾರಿ ಸಂಘದ ಸಹಕಾರಿ ನಿಬಂಧಕರಿಗೆ ನೀಡಿರುತ್ತಾರೆ.

ದಿನಾಂಕ 14-10-2016 ರಂದು ಉಪನಿಬಂಧಕರು ನಮಗೆ ಒಂದು ಆದೇಶವನ್ನು ಮಾಡಿ ಸಿಮೆಂಟ್ ವ್ಯವಹಾರ ಮತ್ತು ಚೆಕ್ಕಿನ ವ್ಯವಹಾರದ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಂಡು ಒಂದು ವಾರದಲ್ಲಿ ವರದಿ ನೀಡುವಂತೆ ಆದೇಶಿಸಿರುತ್ತಾರೆ. ನಂತರ ನಾನು ಸಂಘದ ನಿರ್ದೇಶಕರು ಮತ್ತು 1 ನೇ ಆರೋಪಿಯ ಬಳಿ ಚರ್ಚಿಸಿದಾಗ 1 ನೇ ಆರೋಪಿಯು ಏನೋ ಆಗಿದೆ ಹಣವನ್ನು ವಾಪಸ್ಸು ತುಂಬುತ್ತೇನೆ ಎಂದು ಹೇಳಿದರು. ಆದರೆ ಕೊನೆಗೂ ತುಂಬಲಿಲ್ಲ. ಆದ್ದರಿಂದ ದಿನಾಂಕ 21-10-2016 ರಂದು ಹಣವನ್ನು ತುಂಬುವಂತೆ ಇಬ್ಬರಿಗೂ ನೋಟೀಸು ಕಳುಹಿಸಿರುತ್ತೇವೆ. 2 ನೇ ಆರೋಪಿ ನೋಟೀಸನ್ನು ಸ್ವತಃ ಪಡೆದಿರುತ್ತಾರೆ. 1 ನೇ ಆರೋಪಿಗೆ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿರುತ್ತದೆ. ಸದರಿ ನೋಟೀಸಿಗೆ 1 ನೇ ಆರೋಪಿ ನಾನು ಸದರಿ ಹಣವನ್ನು ತುಂಬುವುದಿಲ್ಲ, ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ನನ್ನಿಂದ ಕೈಗಡ ತೆಗೆದುಕೊಂಡಿರುವುದಾಗಿ ಮರುತ್ತರ ನೀಡಿರುತ್ತಾರೆ. 2 ನೇ ಆರೋಪಿ ತನಗೂ ಅದಕ್ಕೂ ಸಂಬಂಧವಿಲ್ಲ ಎಂದು ಮರುತ್ತರ ನೀಡಿರುತ್ತಾರೆ. ನಂತರ ಸಂಘದವರು ಕಲಂ 64 ರಡಿಯಲ್ಲಿ ತನಿಖೆ ಆಗುವಂತೆ ಸಹಾಯಕ ನಿಬಂಧಕರಿಗೆ ಮನವಿ ಮಾಡಿದೆವು. ಅದರಂತೆ ತನಿಖೆಯೂ ಆಯಿತು. ಸಹಾಯಕ ನಿಬಂಧಕರಿಗೆ ತನಿಖಾ ವರದಿಯನ್ನು ಸಲ್ಲಿಸಲಾಗಿ ಕಲಂ 68 ರಡಿಯಲ್ಲಿ ದಾವೆ ಮಾಡುವಂತೆ ಆದೇಶ ಮಾಡಿರುತ್ತಾರೆ. ಅದರಂತೆ ದಾವೆ ಮಾಡಿ ತೀರ್ಪು ಸಹ ಆಗಿರುತ್ತದೆ. ನಂತರ ಆರೋಪಿತರ ಈ ಕೃತ್ಯಕ್ಕೆ ಆರೋಪಿತರ ವಿರುದ್ಧ ನಾನು ಸಂಘದ ಅಧ್ಯಕ್ಷನಾಗಿ ದಿನಾಂಕ 14-11-2016 ರಂದು ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದೂರು ನೀಡಿದ ಮರುದಿನ ಪೋಲೀಸರು ಸಂಘಕ್ಕೆ ಬಂದು ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದೂರು ತಡವಾಗಿ ದಾಖಲಾದ ಬಗ್ಗೆ ಪೋಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ.

ನಾನು ಕಾರ್ಯನಿರ್ವಹಣಾಧಿಕಾರಿಗಳಿಗೆ ಸಹಿ ಮಾಡಿ ನೀಡಿದ ಚೆಕ್ಕನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಚೆಕ್ ಸಂಖ್ಯೆ 666227 ನ್ನು ನೋಡಿ ಇದೇ ಚೆಕ್ಕು ಎಂದು ಗುರುತಿಸಿರುತ್ತಾರೆ. ಚದರಿ ಚೆಕ್ಕನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿತರಿಗೆ ನೀಡಿದ 2 ನೋಟೀಸಿನ ಪ್ರತಿಗಳನ್ನು ನೋಡುತ್ತಿದ್ದು ನಿಪಿ-4 ಮತ್ತು 5 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು.

(ಎಪಿಪಿಯವರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**